125(4)

"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 21] ಸೋಮವಾರ 8—10—45 [ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ವ್ಯವಹಾರಿಕ, ದೇಹಿಕ ಮಾನಸಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗಳು ಉತ್ತಮವಾಗಿರುತ್ತವೆ ಯಶೋವಂತರಾಗಿ ಬೆಳಗುವಿರಿ.

ವೃಷಭ — ಆರೋಗ್ಯ, ಸಂಪದ ಸ್ಥಿತಿಗಳು ತೃಪ್ತಿಕರವಾಗಿರುತ್ತವೆ. ವ್ಯವಹಾರದಲ್ಲಿ ಪಿತ್ರು ಭಯ, ಕ್ಲೇಶ.

ಕರ್ಕಾಟಕ — ವ್ಯವಹಾರಿಕ, ದೇಹಿಕ, ಮಾನಸಿಕಾರ್ಥಿಕ ಸ್ಥಿತಿಗಳು ಉತ್ತಮವಾಗಿರುವುದಿಲ್ಲ. ಹಿರಿಯರ ಅಗ್ರಹಕ್ಕೆ ಪಾತ್ರರಾಗಬಹುದು.

ಸಿಂಹ — ಧನ ಲಾಭವುಂಟು. ಯಶವುಂಟು. ಸಮಾಜದಲ್ಲಿ ಕೀರ್ತಿಯುಂಟು. ಆರೋಗ್ಯವುಂಟು.

ಕನ್ಯಾ — ಸರ್ವತೋಮುಖವಾಗಿ ಸುಖ ಮತ್ತು ಅಭಿವೃದ್ಧಿಗಳು ಕಾಣಬರುತ್ತವೆ. ಅನಿರೀಕ್ಷಿತ ಲಾಭವುಂಟು. ಮಿತ್ರರೊಡನೆ ಭೇಟಿಯಾಗುತ್ತದೆ.

ತುಲಾ — ದೇಹಾರೋಗ್ಯವು ಚನ್ನಾಗಿರುತ್ತದೆ. ಮನೋ ಸ್ಥಿತಿ ಯು ಶಾಂತವಾಗಿರುತ್ತದೆ. ಸಾಂಪತ್ತಿಕ ವಿಷಯದಲ್ಲಿ ಕುಂದುಕೊರತೆಗಳಿರುವುದಿಲ್ಲ. ವ್ಯವಹಾರದಲ್ಲಿಯೂ ಆನಂದವು ತುಂಬಿರುತ್ತದೆ.

ವೃಶ್ಚಿಕ — ಆರೋಗ್ಯ ವಿಷಯದಲ್ಲಿ ಜಾಗ್ರತೆ. ವ್ಯವಹಾರದಲ್ಲಿ ಶತ್ರುಗಳ ಭಯವಿರುತ್ತದೆ. ಮುಂದೆ ಹೆಚ್ಚು ಲಾಭ ಹೊಂದುವಿರೆಂಬ ಆಸೆಯಿಂದ ಗಂಟನ್ನು ಹಾಳುಮಾಡಿಕೊಳ್ಳಬೇಡಿ.

ಧನಸ್ಸು — ಆರ್ಥಿಕ ದುಸ್ಥಿತಿಯು ಕಾಣಬರುತ್ತದೆ. ಆರೋಗ್ಯವು ಚನ್ನಾಗಿರದು. ಮನಸ್ಸು ವ್ಯಸನಪೂರಿತವಾಗಿರುತ್ತದೆ. ವ್ಯವಹಾರದಲ್ಲಿ ಮೋಸ ಹೋಗುವ ಸಂಭವವುಂಟು.

ಮಕರ — ಆರ್ಥಿಕ, ದೇಹಿಕ, ವ್ಯವಹಾರಿಕ ಸ್ಥಿತಿಗಳು ಉತ್ತಮರೀತಿಯಲ್ಲಿರುತ್ತವೆ.

ಕುಂಭ — ಆರ್ಥಿಕ ದೇಹಿಕ ವ್ಯವಹಾರಿಕ ಸ್ಥಿತಿಗಳು ಉತ್ತಮವಾಗಿರುಲ್ಲ. ಮಕ್ಕಳ ವಿಷಯದಲ್ಲಿ ಎಚ್ಚರಿಕೆ.

ಮೀನ — ಮನೋಚಿಂತೆಯಿಂದ ಬಾಧೆ ಪಡುವಿರಿ. ಆರೋಗ್ಯ ಚನ್ನಾಗಿ ಎವ್ವದಿಲ್ಲ. ಈ ವಾರ ನಿಮಗೆ ಅತ್ಯುತ್ತಮವಲ್ಲ.

ಯಹೂದಿಗಳಿಗೆ ಗುಂಡಿನೇಟು !!!

ಭಾರತದಲ್ಲಿ

ಬಟ್ಟೆ ತಯಾರಿಕೆ

ಮುಂದಿನ ಐದು ವರ್ಷಗಳಲ್ಲಿ ಭಾರತದ ಹತ್ತಿ ಗಿರಣಿಗಳಲ್ಲಿ 720 ಕೋಟಿ ಗಜ ಬಟ್ಟೆಯನ್ನು ಕೈಮಗ್ಗಗಳಲ್ಲಿ 200 ಕೋಟಿ ಗಜ ಬಟ್ಟೆಯನ್ನು ತಯಾರಾಗುವಂತೆ ಟೆಕ್ಸ್‌ಟೈಲ್ ಕಂಟ್ರೋಲ್ ಬೋರ್ಡಿನ ಯೋಜನಾ ಸಮಿತಿ ತಾತ್ಕಾಲಿಕ ಯೋಜನೆಯೊಂದನ್ನು ರಚಿಸಿದೆ.

— ನಿನ್ನೇ ದಿನದಿಂದ ದಸರಾ ಪ್ರಾರಂಭವಾಯಿತು ಶ್ರೀಮನ್ಮಹಾರಾಜರು ನಿನ್ನೆ ಸಿಂಹಾಸನಾರೂಢರಾದಾಗ 21 ಕುಶಾಲ ತೋಪುಗಳನ್ನು ಹಾರಿಸಲಾಯಿತು ಮೈಸೂರು ನಯನ ಮನೋಹರವಾಗಿ ಶೃಂಗರಿಸಲ್ಪಟ್ಟಿದೆ

— ಇದೇ 13 ರಲ್ಲಿ ಮೈಸೂರು ಮಾರ್ಕೆಟ್ ಪ್ರದರ್ಶನ ಬೆಂಗಳೂರು ಪೌರಸಭಾಧ್ಯಕ್ಷ ಶ್ರೀ ಗೋಪಾಲಸ್ವಾಮಯ್ಯಂಗಾರರ ಅಧ್ಯಕ್ಷತೆಯಲ್ಲಿ ನಡೆಯುತ್ತೆ

— ಪ್ರೆಸಿಡೆಂಟ್ ಟ್ರೂಮನ್ನರು 325 ಕೋಟಿ ರೂಪಾಯಿಗಳ ಆಹಾರ ಪತ್ತು ಅರಿವೆಯನ್ನು ಉಚಿತವಾಗಿ ಕೊಡಲು ಯೋಜನೆಯನ್ನು ಮಾಡುತ್ತಿರುವರಂತೆ.

ನ್ಯೂ ಕೃಷ್ಣ ಟಾಕೀಸ್'

ಮಾರ್ನಿಂಗ್ ಷೋ

ತಾ 11—10—45 ರಿಂದ

"ಬಾಳಾಜಿ"

— ಅಥವಾ —

ತಿರುಪತಿ ವೆಂಕಟೇಶ ಮಹಾತ್ಮೆ

ಯಹೂದಿಗಳ ಮೇಲೆ ಗುಂಡು !

ಜೆರೂಸಲೆಂ — ಯಹೂದಿ ಗಡಿ ಹಳ್ಳಿ ಕ್ಫಾರ್‌ಗಿಲಾಡಿಯಲ್ಲಿ ಹೊಡೆದಾಟ ವಾಯಿತ. ಸಿರಿಯಾ ಗಡಿದಾಟಿ ಪ್ಯಾಲಿಸ್ಟೈನಿಗೆ ಯಹೂದಿಗಳು ಬಂದು ನೆಲೆಸಲು ಪ್ರಯತ್ನಿಸಿದ್ದೇ ಕಾರಣ. ಯಹೂದಿಗಳ ಮೇಲೆ ಗುಂಡು ಹಾರಿಸಲು ಕೆಲವರಿಗೆ ಗಾಯವಾಯಿತು.

ಹಡಿನೈದು ಸಾವಿರ ಅನಮೈಟರ ಸಿದ್ಧತೆ

ಸೈಗಾನಿನಲ್ಲಿ ಗಲಭೆಗೆ ಮತ್ತೆ ಜಪಾನಿ ದಂಗೆಕೋರರ ಆಡಳಿತದಲ್ಲಿ 15 ಸಾವಿರ ಅನ್ಯೈವೈಟ್ಸುಗಳು ನಗರದ ಹೊರಗಡೆ ಸಿದ್ಧರಾಗಿರುವರು.

ಜಪಾನ್ ಗುಲಾನುಗಿರಿ ಜನಾಂಗ ಆಗಲಾರದು

ಸಂ. ಸಂ. ದೂರಪ್ರಾಚ್ಯದ ಅಧಿಕಾರಿ ಮಿ॥ ಜಾರ್ಜ್ ವಿಲ್ಸೆಂಟ್ ತನ್ನ ಹೇಳಿಕೆಯಲ್ಲಿ " ಷಿಂಟೋಯಿಸಂ ಮೇಲೆ ಮುಟ್ಟುಕೋಲು ಹಾಕಲಾಗುವುದು : ಗುಪ್ತ ಪೋಲೀಸು ಪಡೆಯು ನಾಶಮಾಡಲ್ಪಡುವುದು ; ಯುದ್ಧ ತಕ್ಷೀರುದಾರರುಗಳೆಲ್ಲ ಮಂತ್ರಿಗಳಾಗಿದ್ದರೂ ಶಿಕ್ಷಾರ್ಹರಾಗುವರು ; ಜಪಾನಿಗಳೇ ತಮ್ಮ ಆಹಾರವನ್ನು ಬೆಳೆಯಬೇಕು : ಯುದ್ಧ ಪೂರ್ವದಲ್ಲಿದ್ದುದಕಿಂತಲೂ ಅವರ ವಿದೇಶ ವ್ಯಾಪಾರವನ್ನು ಕಡಮೆಮಾಡಲಾಗುವುದು : ಭಾರಿ ಕೈಗಾರಿಕೆಯನ್ನು ಒಡೆಯಲಾಗುವುದು ; ನೂತನ ಜಪಾನು ಕಟ್ಟಲ್ಪಡುವ ಸಂದರ್ಭದಲ್ಲಿ ಜಪಾನ್ ನರಿಪ ಅಥವಾ ನಾಶವಾದ ಜನಾಂಗವೆಂದು ಭಾವಿಸಲ್ಪಡುವುದಿಲ್ಲ ' ಎಂದಿರುವರು.

— ಚಿತ್ರದ ಗರ್ದ ತೀವ್ರ ಕ್ವಾವದ ಉತ್ಪಾದನೆಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿದ ಒಗ್ಗೆ ಜನವಾಣಿಯ 3000 ರೂ, ಗಳನ್ನು ಏಕೆ ಮುಟ್ಟುಗೋಲು ಹಾಕಬಾರದೆಂತಲೂ ಮತ್ತು ವಿಶ್ವಕರ್ನಾಟಕದಿಂದ ಏಕೆ ಠೇವಣಿ ಕೇಳಕೂಡದೆಂ ಸರ್ಕಾರ ಆ ಪತ್ರಿಕೆಗಳಿಗೆ ನೋಟಿಸನ್ನು ಕೊಟ್ಟಿದೆ.

ದಸರಾ ವಸ್ತು ಪ್ರದರ್ಶನ

ನಿನ್ನೆ ದಿವಸ ಬೆಳಿಗ್ಗೆ ದಸರಾ ವಸ್ತು ಪ್ರದರ್ಶನ ಪ್ರಾರಂಭವಾಯಿತು. ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸರಾಯರವರು ಪ್ರದರ್ಶನ ಸಮಿತಿ ಕಾರ್ಯದರ್ಶಿಗಳವರು ಸಮಿತಿ ಸದಸ್ಯರುಗಳೂ ಬಂದಿದ್ದರು.

ವಸ್ತು ಪ್ರದರ್ಶನದ ನಮ್ಮ ಪ್ರತಿನಿಧಿ ಈ ರೀತಿ ಬರೆಯುತ್ತಾರೆ.

ಯುದ್ಧ ಪೂರ್ವದಲ್ಲಿ ಸಂಗ್ರಹವಾದಷ್ಟು ವಸ್ತುಗಳ ಸಂಗ್ರಹ ಈ ಪ್ರದರ್ಶನದಲ್ಲಿಲ್ಲ. ಆದರೂ ಕಳೆದ ವರ್ಷಕ್ಕಿಂತಲೂ ಹೆಚ್ಚು ಉತ್ತಮವಾಗಿದೆ. ಮುಕ್ಕಾಲುಪಾಲೆಲ್ಲ ಮಾಮೂಲು ಪ್ರದರ್ಶಕರಿಂದ ಕೂಡಿದೆ. ಅಕ್ಷರ ಪ್ರಚಾರ ಸಮಿತಿಯು ಮುತುವರ್ಜಿಯಿಟ್ಟು ಪ್ರಚಾರ ಮಾಡುತ್ತಿದೆ ಪ್ರೇಕ್ಷಕರು ಅಧಿಕರಾಗಿದ್ದು ಪ್ರೇಕ್ಷಣೀಯವನ್ನೆಲ್ಲಾ ಅತ್ಯುತ್ಸಾಹದಿಂದ ನೋಡುತ್ತಿದ್ದರು ವ್ಯಾಪಾರಕ್ಕೆ ಗಳ ಅಂಗಡಿ ಈ ವರ್ಷ ಹೆಚ್ಚಾಗಿವೆ

— ಮೈಸೂರು ಪತ್ರಿಕೋದ್ಯೋಗಿ ಸಂಘದ ಜನರಲ್ ಮಿಟಿಂಗು ಇದೇ 28 ರಲ್ಲಿ ಸೇರುವುದು

ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಡಿ

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ರಾಜಕೀಯ ಪಕ್ಷಗಳು ಉದ್ಭವಿಸಿರುವುದಂತೆ.

ಂ ಂ

ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳಿಗೆ ಬೆಂಬಲ ಅಧಿಕವಂತೆ.

ಂ ಂ

ಸವ್ಯ ಪಕ್ಷಕ್ಕಿಂತ, ಹಿಂದೂ ಮಹಾಸಭೆ ತಲೆಯನ್ನು ಸ್ವಲ್ಪ ಎತ್ತಿದೆಯಂತೆ

ಂ ಂ

'ವಂದೇಮಾತರಂ' ಗೀತೆಯನ್ನು ಬಹಿಷ್ಕರಿಸಬೇಕೆಂದು ಕೆಲವು ಪಕ್ಷಗಳವಾದವಂತೆ.

ಂ ಂ

ಸವ್ಯದ ಸ್ಥಿತಿಗತಿಗಳಲ್ಲಿ ಪ್ರವೇಶಿಸುವುದು ಸರಿಯೇ, ತಪ್ಪೇ ಎಂಬುದನ್ನು ಚರ್ಚಿಸಲು ವಿದ್ಯಾರ್ಥಿ ಮುಸ್ಲಿಂ ಲೀಗ್ ಸ್ಥಾಪನೆಯಾಗುವುದಂತೆ.

ಂ ಂ

ರಾಜಾಜಿ ವಿಶ್ವವಿದ್ಯಾನಿಲಯ ಸಂಘಕ್ಕೆ ಭೇಟಿಕೊಡಬಹುದೆಂದು ಊಹಿಸಿ ಪಕ್ಷನೊಂದು ಕರೀ ಬಾವುಟವನ್ನು ಸಿದ್ಧಮಾಡಿಕೊಳ್ಳುತ್ತಿರುವುದಂತೆ.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ವಾರ್ತಾತರಂಗ

ಆಗ್ರಾ ಅ 3— ಮಂಗಳಸೇ ಚಂದ್ರ ಭಾರ್ಗವ ಅಂಗಡಿಯ ಪ್ರತಿನಿಧಿಗಳಾದ ಚಂದ್ರಭಾರ್ಗವ ಮತ್ತು ಫೂಲ್‌ಚಂದ್ ಇವರು ತಮ್ಮ ಸರಕನ್ನು ಸುಲಭವಾಗಿ ಒಪ್ಪಿಸಲು ವಿಲಟರಿ ಗಡಂಗಿನ ಸಾರ್ಜೆಂಟರಿಗೆ 1000 ರೂ. ಲಂಚಾ ಮಾತಾಡಿದರು. ಹಣ ಪಾವತಿ ಮಾಡುತ್ತಿದ್ದಾಗ ಅವರನ್ನು ಪೋಲೀಸಿನವರು ಹಿಡಿದು ತನಿಖೆ ಮಾಡಿದರು. ಇಬ್ಬರಿಗೂ ತಲಾ 4 ತಿಂಗಳು ಕಠಿಣ ಶಿಕ್ಷೆ ಮತ್ತು ರೂ 250 ದಂಡ ವಿಧಿಸಲಾಯಿತು.

ಂ ಂ

ಟೋಕಿಯೋದಲ್ಲಿ ಸ್ಥಾಪಿತವಾಗಿರುವ ಮಿಲಿಟರಿ ಕೋರ್ಟಿನವರು ಮಾರು ಅಮೇರಿಕ ಸಿಪಾಯಿಗಳು ತುಂಬಾ ಕುಡಿದು ಒಂದು ಹೋಟಲು ಪ್ರೊಪ್ರೈಟರ್ ಮತ್ತು ಅತನ ಮಗನನ್ನು ಕೊಂದುದಕ್ಕಾಗಿ 10 ವರ್ಷ ಕಠಿಣ ಶಿಕ್ಷೆ ವಿಧಿಸಿರುವರು.

ಂ ಂ

ಬಿಹಾರ್, ಸಿಂಧ್, ಪಂಜಾಬ್, ವಾಯವ್ಯ ಗಡಿ ಪ್ರಾಂತ್ಯ ಮತ್ತು ಒರಿಸ್ಸಾ ಈ ಐದು ಪ್ರಾಂತ್ಯಗಳಿಗೆ ಹೊಸದಾಗಿ ಗೌರ್ನರುಗಳ ನೇಮಕವಾಗಿದೆ. ಒರಿಸ್ಸಾಕ್ಕೆ ಸರ್ ಚಂದೂಲಾಲ್ ತ್ರಿವೇದಿಯವರು ನೇಮಿಸಲ್ಪಟ್ಟಿದ್ದಾರೆ. ಲಾರ್ಡ್ ಸಿಂಹನಂತರ, ಭಾರತೀಯರಿಗೆ ಈ ಪದವಿ ದೊರೆತಿರುವುದು ಇದೇ ಮೊದಲು.

ಂ ಂ

ಪರ್ಲ್‌ಹಾರ್ಬರ್ ದುರಂತದ ಸಮಯದಲ್ಲಿ ಜಪಾನ್ ವಿದೇಶಾಂಗ ಮಂತ್ರಿಯಾಗಿದ್ದ ಅ || ಟೋಗೋರವರು ಯುದ್ಧ ತಕ್ಷೀರುದಾರರಾಗಿ ದಸ್ತಗಿರು ಮಾಡಲ್ಪಟ್ಟರು.

ಂ ಂ

ಹಿಂದೂಸ್ಥಾನ ಸರಕಾರದವರು ಯುದ್ಧೋತ್ತರ ಕಾಲದಲ್ಲಿ ದಶಾಂಶ ರೂಪಕವಾದ ಹೊಸ ನಾಣ್ಯಗಳನ್ನು ತೆಗೆಯುತಕ್ಕವಿದ್ದು ಅವುಗಳ ಉತ್ಕೃಷ್ಟನಕ್ಕೆಯು ಮಾದರಿಯನ್ನು ಕಳಿಸುವ ಕಲಾವಿದನಿಗೆ ರೂ. 2000 ಇನಾಮಾಗಿ ಕೊಡುವದಾಗಿ ಪ್ರಕಟಿಸಿದ್ದಾರೆ.

ಂ ಂ

ಜಪಾನ್ ಸೈನ್ಯವನ್ನು 7 ಸೇ 4 ಭಾಗ ಎಸರ್ಜಿಸಲಾಗಿದೆ. ಹಿರೋಹಿಟೋರು ರಾಜ್ಯಪರಿತ್ಯಾಗವನ್ನು ಯಾವ ಪಾರ್ಟಿಯವರೂ ಇಚ್ಛಿಸುತ್ತಿಲ್ಲ.

ಹಿಮಾಲಯದ ಜ್ಯೋತಿರ್ಮಠದ ಸ್ವಾಮಿಗಳ ಸಪರ್ದಾಧಿಕಾರಿಯು, ಮೈಸರಾಯರು ಭಾರತಮಂತ್ರಿಯವರನ್ನು ಮತ್ತೆ ನೋಡುವರೆಂದೂ, 1946 ನೇ ಫೆಬ್ರವರಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದೆಂದು ಭವಿಷ್ಯ ಹೇಳಿರುವರ .

ಯಹೂದ್ಯರನ್ನು ಜರ್ಮನಿಗೆ ಸೇರಿಸಿರೆಂದು ಬ್ರಿಟನ್ನಿಗೆ ಪ್ರೆಸಿಡೆಂಟ್ ಟ್ರೂಮನ್ನರ ವಿನಂತಿಯಾಗಿದೆ.

ಪ್ಯಾಲಿಸ್ಟೈನನ್ನು ವಿಭಾಗಿಸಿದರೆ ಅರಬ್ಬರು ಧರ್ಮಯುದ್ಧ ನಡೆಸುವುದಾಗಿ ತಿಳಿಸಿರುವರು.

ಕೈಮಗ್ಗದ ಬಟ್ಟೆಯ ಕ್ರಯ ನಿಗದಿಯು ಇನ್ನು ಮುಂದಿಲ್ಲವೆಂದು ಸುದ್ದಿ ರಾಸು ಸರಕಾರದ ಆಜ್ಞೆ. ಮಿಲ್ ಬಟ್ಟೆಗಳು ಹೆಚ್ಚಾಗಿ ದೊರೆಯುವದರಿಂದ ಕೈ ಮಗ್ಗದ ಬಟ್ಟೆದರ ಹೆಚ್ಚಾಗಿ ಹಾಕಿದರೆ ವ್ಯಾಪಾರ ತಾನೇ ಆಗುವುದಿಲ್ಲವೆನ್ನುವುದೇ ಇದಕ್ಕೆ ಕಾರಣ.

ಬ್ರಿಟನ್ನಿಗೆ ಹೆಸ್ಸನ್ನು ಹಿಟ್ಲರೇ ಕಳುಹಿಸಿದ್ದೆಂದೂ, ಅವನು ಚರ್ಚಿಲ್ ಸರಕಾರವನ್ನು ಯುದ್ಧದಿಂದ ವಾಪಸ್ಸಾಗುವಂತೆ ಮಾಡಿ, ಜರ್ಮನಿಯು ರಷ್ಯಾ ಮೇಲೆ ಮಾತ್ರ ಯುದ್ಧ ನಡೆಸಲು ಅನುಕೂಲಿಸಲು ಎಪ್ಪಾಡು ಮಾಡಲು ಹೀಗೆ ಮಾಡಲಾಗಿದ್ದಿತೆಂದೂ ಕರ್ಮನ್ ಸರಕಾರಿ ಕಾಗದಪತ್ರಗಳು ತಿಳಿಸುತ್ತವೆ.

ಲಂಡನ್ ಅ 1— ಅಮೇರಿಕಾದ ಯಹೂದ್ಯ ಮುಖಂಡರು ಗಾಂಧೀಜಿಯವರ ಅಸಹಕಾರ ಚಳವಳಿಯಂತೆ ತಾವೂ ಹೂಡಬೇಕೆಂದು ಯೋಚಿಸಿದ್ದಾರೆ. ನ್ಯೂಯಾರ್ಕಿನ ಒಂದು ವಾರ್ತೆಯಂತೆ ಅಮೇರಿಕಾ ಜಿಯೋನಿಸ್ಟ್ ಸಂಘಾಧ್ಯಕ್ಷರು ಪ್ರಪಂಚದ ಎಲ್ಲಾ ಯಹೂದಿಗಳೂ ಬ್ರಿಟಿಷ್ ಸಾಮಾನುಗಳ ಬಹಿಷ್ಕಾರ ಪ್ರಾರಂಭಿಸುವಂತೆ ತಿಳಿಸಿರುವುದಾಗಿಯೂ, ಪ್ಯಾಲಿಸ್ಟೈನಿನಲ್ಲಿಯ ಯಹೂದ್ಯರು ಅಸಹಕಾರ ಚಳವಳ ಪ್ರಾರಂಭಿಸುವುದಾಗಿ ಘೋಷಿಸಬೇಕೆಂದೂ ಸೂಚಿಸಿರುವನೆಂದೂ ತಿಳಿಯಬಂದಿದೆ.

ಲಂಡನ್ನಿನಲ್ಲಿ ನಡೆದ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ಮುಗಿಯಿತು. ಅವರಲ್ಲಿನ ಭಿನ್ನಾಭಿಪ್ರಾಯವೇಸೂ ವ್ಯವಸ್ಥೆಯಾಗಲಿಲ್ಲ. ಸುತ್ತೆ ಈ ಬಿಕ್ಕಟ್ಟು ನಿವಾರಣೆಗೆ ತ್ರಿಮೂರ್ತಿಗಳ ಸಮ್ಮೇಳನ ಆಗುವುದೆಂದು ನಿರೀಕ್ಷಿಸಲಾಗಿದೆ.

ಭಾರತದಲ್ಲಿ

ಭಂಗಾರದ ವ್ಯಾಪಾರ

ಇಲ್ಲಿಂದ ಪರದೇಶಕ್ಕೆ ಹೋಗುವ ಸಾಮಗ್ರಿಗಳ ಬದಲು ನಮಗೆ ಭಂಗಾರ ದೊರೆಯಬೇಕು. ಹೀಗೆ ಭಾರತೀಯರ ವಿನಂತಿಯಿತ್ತು. ಕಳೆದ 1943 ನೇ ಆಗಸ್ಟ್ 17 ರಿಂದ ರಿಜರ್ವ್ ಬ್ಯಾಂಕು ಆಗಿಂದಾಗ್ಗೆ ಭಂಗಾರ ಮಾರುತ್ತಾ ಬಂದಿದೆ. ಇಂಗ್ಲೆಂಡು ಮತ್ತು ಅಮೇರಿಕಾ ಕಡೆಯಿಂದ, ಭಾರತದಲ್ಲಿ ಅವರ ಒಗ್ಗೆ ನಡೆಯುವ ವ್ಯಾಪಾರಕ್ಕೆ ಪ್ರತಿಫಲವಾಗಿ ಭಂಗಾರ ದೊರೆಯುತ್ತದೆ. ಭಾರತೀಯ ಸರ್ಕಾರಕ್ಕೆ ದಕ್ಷಿಣ ಆಫ್ರಿಕಾದಿಂದ ಕಮ್ಮಿ ದರದಲ್ಲಿ ಭಂಗಾರ ಪುರುವಟೆಯಾಗುವ ಕರಾರು ಇದೆ. ಎನ್ನುವಾಗ ಅಲ್ಲಿಂದ ಕಮ್ಮಿ ಬೆಲೆಗೆ ಭಂಗಾರ ತರಿಸಿ ಇಲ್ಲಿ ಅಧಿಕ ಬೆಲೆಗೆ ಅದನ್ನು ಮಾರುತ್ತಾರೆ. ಅಲ್ಲಿ 4 ಪೌಂಡಿಗೆ 1 ಔನ್ಸ್ ಭಂಗಾರ ದೊರೆಯುವುದಾದರೆ ಇಲ್ಲಿ ಅದನ್ನು ಔನ್ಸಿಗೆ 16 ಪೌಂಡಿನವರೆಗೆ ಮಾರುತ್ತಾರೆ. ಇಂಗ್ಲೆಂಡಿನ ಬ್ಯಾಂಕುಗಳಲ್ಲಿ ಔನ್ಸಿಗೆ 171 ಶಿಲಿಂಗ್ ಪ್ರಕಾರ ಭಂಗಾರ ಕೊಂಡುಕೊಂಡು ಅಮೇರಿಕಾಕ್ಕೆ ಔನ್ಸಿಗೆ 174 ಶಿಲಿಂಗ್ ಪ್ರಕಾರ ಮಾರುತ್ತವೆ. ಆದೇ ಬ್ಯಾಂಕುಗಳು ದಕ್ಷಿಣ ಆಫ್ರಿಕದ ಭಂಗಾರವನ್ನು 71 ಶಿಲಿಂಗ್ ದರದಲ್ಲಿ ಕೊಂಡುಕೊಂಡು ಭಾರತಕ್ಕೆ 320 ಶಿಲಿಂಗ್ ಬೆಲೆಗೆ ಮಾರುತ್ತವೆ. ಈ ವ್ಯಾಪಾರಕ್ಕೆ ಯಾವ ಹೆಸರಿಂದ ಕರೆಯಬೇಕೆಂಬುದೇ ಹೊಳೆಯುವುದಿಲ್ಲ. ನಮಗೆ ದಕ್ಷಿಣ ಆಫ್ರಿಕದಿಂದ ಭಂಗಾರ ಕೊಂಡು ಕೊಳ್ಳಲು ನಿರ್ಬಂಧವಿದೆ. ಅಮೇರಿಕಾ ನಮ್ಮ ಭಂಗಾರದ ಬೆಲೆಯನ್ನು ರೂ. 30–35 ರ ದರಕ್ಕೆ ಇಳಿಸಿದಾಗ ಕೊಂಡು ಕೊಂಡ ಭಂಗಾರವನ್ನೇ ಇದೀಗ ನಮಗೆ ರೂ. 70-80 ರ ದರದಲ್ಲಿ ಮಾರುವರು. ಹೀಗೆ ನಮ್ಮ ಹಣದಿಂದಲೇ ನಮ್ಮ ಸಾಮಗ್ರಿಗಳನ್ನು ಕೊಳ್ಳುತ್ತಾರೆ. ಇಲ್ಲಿಯ ವ್ಯಾಪಾರ ನಮ್ಮ ಲಾಭಕ್ಕಾಗುವುದಿಲ್ಲ. (ಪ್ರ)

ಮುಂಬಯಿಯ ಒಂದು ಸಿನಿಮಾ ಭವನದಲ್ಲಿ ಕಳೆದ ವಾರ ಒಂದು ಹರಾಜು ನಡೆಯಿತು. ಒಂದು ಗಾಂಧೀಜೀಯವರ ಚಿತ್ರ, ಮತ್ತೊಂದು ಪಂ || ನೆಹರೂರವರ ಚಿತ್ರ. ಹೀಗೆ ಎರಡು ಚಿತ್ರಗಳನ್ನು ಶ್ರೀಮತಿ ಸರೋಜಿನಿ ನಾಯ್ಡು ಹರಾಜು ಹಾಕಲಾಗಿ, ರೂ. ಎರಡು ಸಾವಿರ ಬಂದಿತು. ಇದು ಕಮಲಾನೆಹರು ನಿಧಿಗಾಗಿ ಕೊಡಲಾಯಿತು

ವೈತ್ತಾಂತ ಸಂಗ್ರಹ

ಟೋಕಿಯೋ, ಅ 5 — ಹೋಂ ಮೆಂಬರು ಇವಾಕುವಾನ-ಸತಾಪಯನ್ನು ಡಿಸ್‌ಮಿಸ್ ಮಾಡಿರೆಂದು ಜಪಾನ್ ಮೆಕಾರ್ಥರರು ಪ್ರಂತ್ರಿ ಮಂಡಲಕ್ಕೆ ಕೊಟ್ಟ ಆಜ್ಞೆಯ ಫಲಿತಾಮವಾಗಿ ಮುಖ್ಯ ಮಂತ್ರಿ ಮತ್ತಿತರರೂ ಕೊಟ್ಟರಾಜೀನಾಮೆಯನ್ನು ಚಕ್ರವರ್ತಿಗಳು ಅಂಗೀಕರಿಸಿದರ . ಹೊಸ ಮಂತ್ರಿ ಮಂಡಲ ಮೆಕಾರ್ಥರರ ಸಲಹೆ ಪೇರಿಲೆ ಚಕ್ರವರ್ತಿಗಳು ಮಾಡಲಿರುವರು.

ಲಂಡನ್ನಿನಲ್ಲಿ ಮೈಸೂರು ಸಂಸ್ಥಾನದ ಟ್ರೇಡ್ ಕಮಿಷನರಾಗಿ ಸಿ ಎಲ್ ಸಕ್ಸೈ ಕಟ್ರೋಲರ್ ಶ್ರೀ ಗಣಪತಯ್ಯನವರು ನೇಮಿಸಲ್ಪಡುವರೆಂದು ತಿಳಿಯಬಂದಿದೆ.

ಪ್ಯಾರಿಸ್, ಅ 4 — ಮಾಜಿ ಮುಖ್ಯ ಮಂತ್ರಿ ಲಾಪಲ್ಲರಿಗೂ ಜಡ್ಜಿಯವರಿಗೂ ಒಸಿಬಿಸಿ ಮಾತಾಗಿ ಈ ರೀತಿಯಿದ್ದರೆ ತಾನು ವ್ಯವಹಾರ ನಡೆಸಲು ಸಾಧ್ಯವಿಲ್ಲವೆಂದರು ಜಡ್ಜರು. ಲಾವಲತ ಲಾಯರುಗಳು ತಾನು ಮೊಕದ್ದಮೆ ನಡೆಸಲು ಸಾಧ್ಯವಿಲ್ಲವೆಂದರು ಲಾವಲತ ಲಾಯರುಗಳು ತಾವು ಮೊಕದ್ದಮೆ ನಡೆಸುವುದಿಲ್ಲವೆಂದರು ಲಾವಲರು ತಾವೇ ಮೊಕದ್ದಮೆ ನಡೆಸುವುದಾಗಿ ತಿಳಿಸಿದರು ಅವರನ್ನು ಕೋರ್ಟಿಸಿಂದ ಕರೆದೊಯ್ಯಲಾಯಿತು

ಜಪಾನಿನ ರಾಜಕೀಯ ಬಂದಿಗಳನ್ನು ಬಿಡಿದಿರುವುದು ತುಂಬಾ ಖಂಡಿಸಲ್ಪಟ್ಟಿದೆ.

ಜಾವಾದ ಬಂದರುಗಳಲ್ಲಿ 15 ಲಕ್ಷ ಟನ್ ಸಕ್ಕರೆ ಸಿಕ್ಕಿರುವುದಾಗಿಯೂ, ಇದನ್ನು ಮಿತ್ರ ರಾಷ್ಟ್ರಗಳ ಸಂಗ್ರಹಕ್ಕೆ ಸೇರಿಸಿ ಸಂಯುಕ್ತ ಸಂಸ್ಥಾನಕ್ಕೆ ಸಾಗಿಸಲಾಗುವುದೆಂದೂ ವರದಿಯಾಗಿದೆ.

ಮಿಡ್ವಾಪುರದಲ್ಲಿ 1942 ರಲ್ಲಿ ಸುಂಟರಗಾಳಿ ಹಾವಳಿಯಿಂದ 40 ಸಾವಿರ ಮಂದಿ ಸಾವಿಗೆ ತುತ್ತಾದರೆಂದು ರಾಮಕೃಷ್ಣ ಮಿಷನ್ನಿನವರ ಮಂದಿ.

ಬೊಂಬಾಯಿನ ವಾರ್ತೆಯಂತೆ 14 ಜನರ ಮೇಲೆ ಕಾಂಗ್ರೆಸ್ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

ಜಾವಾದ ಎರಡು ಮುಖ್ಯ ನಗರಗಳಿಂದ ಪೂರ್ವದಲ್ಲಿ ಡಚ್ಚರ ಮುಖ್ಯ ನೌಕಾ ನಿಲ್ದಾಣ ಸುರಬಾಯಿ ಪುತ್ತು ಜಟೇವಿಯಾಕ್ಕೆ ಎಪ್ಪತ್ತು ಮೈಲಿ ದೂರದಲ್ಲಿರುವ ತತ್ಕಾಲಿಕ ರಾಜಧಾನಿ ಜಾಂಡುಗವನ್ನು ರಾಷ್ಟ್ರೀಯರು ಹಿಡಿದಿರುವರು. ಆರೂವರೆ ಸಾವಿರ ಡಚ್ಚರು ಬ್ರಿಟನ್ನಿನಿಂದ ಅಲ್ಲಿಗೆ ಹೋಗುವರು.

ಬಾಪುವಿನ ಹುಟ್ಟುದಿನ

ಬಾಪುವಿನ ಬಾಳುವೆಯು ಹೊಸದೂ ಹೌದು, ಹಳೆಯದೂ ನಿಜ. ಅದೊಂದು ಮಹಾಪೂರದಂತೆ ವೇಗವಾಗಿ ಹರಿಯುತ್ತಿರುವ "ಮಧುರಜೀವನ!" ಭಾರತವ ಗ ಲಾಮಗಿಂಯನ್ನು, ಅಸ್ಪೃಶ್ಯತೆ, ಹಿಂಸಾಭಾವ ಮೊದಲಾದ ಹೀನಾಯ ನೈರ್ಮಾಲ್ಯವನ್ನು ಕೊಳೆಯುವುದರಲ್ಲೇ ಅಂದಿಂದಿನವರೆಗೂ ತುಂಬಿ ಹರಿದಿದೆ. ಗಾಂಧೀ ಅವರು ಈಗ ತನ್ನ ಎಪ್ಪತ್ತಾರನೆಯ ಹೊಸಲನ್ನು ದಾಟುತ್ತಿರುವರು. ಅವರ ಅನಂತವಾದ ಬಾಳಿನಲ್ಲಿ ಈ ವರ್ಷವು ಒಂದು ಬಿಂದು ಸಮಾನ. ಆದರೆ ಅದು ಅಖಿಲ ವಿಶ್ವದ, ಇತಿಹಾಸದ ಪಾಮ್ಯುಲ್ಯವಾದ ಘಳಿಗೆಗಳು. ಬಾಪು ಅವರು ಈ ವರ್ಷದಲ್ಲಿ ತನ್ನ ನಾಡಿಗೆ ಅತ್ಯವಶ್ಯಕ ಸೇನೆಯನ್ನೆರ್ಪಿಸಿರುವರು. ತನ್ನ ಖಂಡ ಕಾಲದ ಸೆರೆವಾಸದಲ್ಲಿ. 'ಬಾ', ಮಹದೇವ ಬಾಯಿಯಾ. ಮೊದಲಾದ ಅಮೂಲ್ಯವಾದ ಅವಶ್ಯಾಲ್ಯ ರತ್ನಗಳನ್ನ ಕಳಕೊಂಡ ದುಃಖದೆಡೆಯಲ್ಲಿ, ಬೆಂದು ಬಸವಳಿದು ಹೊರಬಂದರು. ಅವರೆ ಏನು? ಅವರಿಗೆ ವಿರಾಮವಿಲ್ಲ ಅವರು ಭಾರತವ ಉಸಿರು. ಅವರು ಸ್ತಬ್ದರಾದರೆ, ಭಾರತವೆಲ್ಲಾ ಸ್ತಬ್ದವಾಗುವುದು.

ಬಾಪೂ ತನ್ನ ಆಸೆಯ ದೃಷ್ಟಿಯನ್ನು ಪುನಃ ಸರಕಾರದೆಡೆಗೆ, 'ಸಂಘಟನೆ' ಅತ್ತ ಹರಿಸಿದರು. ಅವರ ಲೇಖನಿಯಿಂದ ಜಿನ್ನಾ-ಗಾಂಧಿ ಪತ್ರವ್ಯವಹಾರವು ಸಾಗಿತು. ಅದರೊಂದಿಗೇ ಜಿನ್ನಾ ಭೇಟಿ! ಅದೆಂತಹಾ ಎಂಚೊಮ್ಮೆ ಮಿಂಚಿತು ದೇಶವೆಲ್ಲಾ? ಅದೆಂತಹ ಆಸೆಯ ಕಿರಣವನ್ನು ಬೆಳಗಿಸಿದರು ಬಾಪು! ದೇಹಶ್ರಮ — ಅಭಿಮಾನ — ಸೋಲುಗಳ ಪರಿವೆ ಇಲ್ಲದೆ ವಾಸಿಸಿದರು ಅವರು. ಆದರೆ ಸಾಧಿಸಲಿಲ್ಲ. ನಿರಾಸೆಯೆಂಬುದಿಲ್ಲ ಅವರಿಗೆ.

"ನಾನು ದುಡಿಯುತಿರುವೆ. ಎಲ್ಲವೂ ಅನಸ ಕೈವಾಡ" ಎಂಬುದು ಅವರ ಮಾತು. ಹಾಗೆ ವೈಸರಾಯ್ — ಗಾಂಧಿ ಮಾತುಕತೆಗಳನ್ನು ಮುಂದಿಟ್ಟರು. ಬಾಪೂ — ಗಾಂಧೀಜಿ ಪುನಃ ಕಾರ್ಯರಂಗದಲ್ಲಿ ಸೆಣಸಲು ಸೊಂಟಕಟ್ಟಿದರು. ಅದರ ಫಲವಾಗಿ ಸಿಮ್ಲಾ ಪರಿಷತ್ತಿ ಘೋಷಣೆ ಹೊರಟಿತು. ನಾಡಿನ ಕೋಟ್ಯಾನುಕೋಟಿಯ ಎದೆಯಲ್ಲಿ ಪುನಃ ನಿರೀಕ್ಷೆಯ ತೆರೆ ಎದ್ದಿತು. ಬಾಪೂ ತಣಿಯಲಿಲ್ಲ. ತನಗಾಗಿ ಬಂದ ಕರೆಯನ್ನು ಮರೆತು, 'ನಾನು ಒರಲಾರೆ. ಆಜಾದ್, ನೆಹರೂ ಮೊದಲಾದ ಅಲ್ಲಿ ಬರಬೇಕು' ಎಂದು ಅಲ್ಲೂ ವಾದಕ್ಕೆ ನಿಂತರು. 'ದೇಶ ಕಲ್ಯಾಣ ಸ್ವಾತಂತ್ರ್ಯ' ಅದು ಅವರ ನೆಡೆನುಡಿಯು ತಳಹದಿ!

ಎಲ್ಲಾ ಮುಖಂಡರೂ ಬಿಡಗಡೆಯಾದರು. ಅವರ ಮುಂದೆ ಯೋಜನೆಯು — ಕಾರ್ಯದ ಬೆಟ್ಟವನ್ನೇ ತಂದಿಟ್ಟರು ಬಾಪೂ. ಎಲ್ಲರೂ ಸಿಮ್ಲಾದ ಸ್ವಾಗತವನ್ನ ಹೊಂದಿದರು ಆದರೆ 'ಜಗತ್ತಿನ ಮಹಾತ್ಮನಾಗಿ, ಅಖಿಲ ಆರ್ಯಾವೃತ್ತದ ದಂದರನಾಗಿ' ಅಲ್ಲ ಅದೊಬ್ಬ ನಿಷ್ಪಕ್ಷ ನಿರೀಕ್ಷಕನಾಗಿ, ಅದರೂ ವೇವಲ್ಲರನ್ನ ಕಂಡರು. ಭಾರತ ಸ್ವಾತಂತ್ರ್ಯ. ಅದರ ಧ್ಯೇಯಗಳನ್ನು ಚರ್ಚಿಸಿದರು. 'ಸಂಘಟನೆಯೇ ನಮ್ಮ ಗುರಿ. ದೇಶವು ಸಿದ್ಧವಿದೆ' ಎಂದು ತನ್ನ ವಂತ್ರ ಮುಗ್ಧವಾತುಗಳಿಂದ ಅವುಗಳನ್ನು ವಾದಿಸಿದರು. ಆದರೂ ಸಾಧಿಸಲಿಲ್ಲ. ಎಷ್ಟೊಂದು ದಿನದ ಪ್ರಯತ್ನ? ಅದೆಂತಹ ಶ್ರಮ-ಸೋಲುಗಳ ತಾಂಡವ? 'ಇಲ್ಲ, ನಾನು ನಿರಾಸೆ ಪಡಲಾರೆ, ನಾವು ಇನ್ನೂ ದುಡಿಯಬೇಕಿದೆ' ಎಂದು ಹೊರಟರು ಅವರು ಸಿಮ್ಲಾದಿಂದ ಅವರು ಅಷ್ಟೊಂದು ಶಾಂತಿಯ ಪ್ರವಾದಿಗಳು. ಭಾರತವು ಅವರಿಗೆ ಎಂದೆಂದಿಗೂ ಚಿರಋಣಿಯಾಗುವುದು!

ಸೇವಾಗ್ರಾಮದ ಧ್ರುವತಾರೆಯನ್ನು ಆರಸುತ್ತಾ ಮುಖಂಡರು ಬಂದರು ಬಾಪೂ ಇನ್ನೂ ಒಂದರಮೇಲೊಂದಾಗಿ ಘಟ್ಟಿಸಿದುದನ್ನು ಮರೆದಿಲ್ಲ! ಆ ಬೇಸರ ವಿಷಾಧದ ರೇಖೆ ಇನ್ನೂ ಅವರಿಂದ ತೊಲಗಿಲ್ಲ. ಮುಂದಣ ಹೆಜ್ಜೆಯ ಮುಂಭಾಗದಲ್ಲಿ ಅವರು ತಲ್ಲೀನರಾಗುತ್ತಿರುವರು.

ಬಾಪುವಿನ ನಾಲ್ಕನೆತ್ತು ಭಾರತದ ರಾಷ್ಟ್ರಭಾಕ್ತರು ನೆರೆಯುತ್ತಿರುವರು. ಮೊನ್ನೆ ಮೊನ್ನೆಯೇ ಅವರು ಜನಾವಣೆ ರಂಗಕ್ಕಾಗಿ ಭಾರತವನ್ನು ಸಿದ್ಧಗೊಳಿಸುವ ಘೋಷಣೆಯನ್ನು ಹೊರಡಿಸಿರುವರು!

ಬಾಪೂ ಅವರೆಂತಹ ದಿವ್ಯ ಪುರುಷರೂ ಕರ್ಮ ವೀರರು! ಅವರು ಜಗತ್ತಿನ ರತ್ನವೊಂದು; ಭಾರತದ ದಿವ್ಯಜೋತಿ! ತನ್ನದೆಲ್ಲವನನ್ನೂ ಭಾರತಾಂಬೆಯ ಉಡಿಯಲ್ಲಿ ಹಾಕಿ ನಿಂದಿರುವ ಮಹಾಪುರುಷರವರು! ಅವರ ದಿನವೆ ನಮ್ಮ ಹಬ್ಬದ ದಿನ-ಗೆಲುವಿನ ದಿನ!

ಭಾರತೇತಿಹಾಸದ ಸುವರ್ಣಗಳಿಗೆಗಳವು. ಅದನ್ನು ಅತ್ಯಂತ ಯಶಸ್ವಿಯಾಗಿ ಆಚರಿಸುವುದು ನಮ್ಮ ಕರ್ತವ್ಯ ಬಾಪುವಿನ ಬಾಳುವೆಯು ಎಪ್ಪತ್ತಾರು ವರ್ಷಗಳು ಎಪ್ಪತ್ತಾರು ಗಳಿಗೆಗಳಂತೆ ಕ್ಷಣಕ್ಷಣವೆದ ಹೋಗಲಿ. ಭಾರತದ ನಾಲ್ಕನೆತ್ತ ಕೋಟಿಯ ತೃಡೀಕಾಲನಂದರೂ, ಅವರು ಚಿರಾಯುವಾಗಲಿ! ಆದರೆ ಅದೆ ಸಾಧ್ಯವೆ?

ಮಹಾತ್ಮರ ಜೀವಿತದ ಚಣಚಣವೂ ನಮ್ಮ ಸಂಸ್ಕಾರಕ್ಕಾಗಿ, ನಮ್ಮ ಬಾಳುವೆಯ ರೂಪರೇಖೆಯ ಚಿತ್ರಕ್ಕಾಗಿ ವ್ಯಯವಾಗಿದೆ. ನಮ್ಮ ಜೀವನದಲ್ಲಿ ಅಮರವಾದ ಬೆಳಕನ್ನು ಬೆಳಗಿಸಿದರು ಅವರು 'ನಗ್ನ ಫಕೀರ' ರೆನಿಸಿದರು ಗಾಂಧೀಜಿ. ಅವರು ಕೈಸ್ತ - ಕೃಷ್ಣ - ಬುದ್ಧ - ಮಹಮ್ಮದರಂತೇ ಚಿರಾಯು ವರ್ಚಸ್ವಿಗಳು. ಅವರ ಸೆನೆಪು ನಮಗೊಂದು ಹೆಮ್ಮೆ-ನಾಡಿಗೊಂದು ಜೆಲುವು. ಅವರ ಹುಟ್ಟು ದಿನವು ಪ್ರತಿಯೊಬ್ಬ ಭಾರತೀಯನ ಮನೆಮನೆಯ ಹಬ್ಬವಾಗಬೇಕು. ಅದು ನಮ್ಮ ಜೀವನ ಸಂತಸದ ಕರ್ತವ್ಯಪೂರಿತವಾದ ದಿನವಾಗಬೇಕು — ಖಾಧೀ ಪ್ರಚಾರ ಗಾಂಧೀ ತತ್ವಬೋಧನೆ ಹರಿಜನ ಸೇವೆ ಅಹಿಂಸಾ ಪ್ರಚಾರದಿಂದ ವೃತಬದ್ಧರಾಗಿ ಅದನ್ನು ನಡೆಸಬೇಕು (ನ ಭಾ)

ಜಪಾನ್ ದಂಡಯಾತ್ರೆ ಏನಾದರು ನಡೆದಿದ್ದರೆ ಜಪಾನ್ ಸಂಪೂರ್ಣವಾಗಿ ಹಾಳಾಗುತ್ತಿತ್ತು ಮಿತ್ರರಾಷ್ಟ್ರಗಳು ಜಪಾನಿನ ವಿಚಾರಗಳಲ್ಲಿ ಕೈಗೊಂಡಿರುವ ಉತ್ಯಮವು ಸಂಪೂರ್ಣತೃಪ್ತಿಯನ್ನುಂಟುಮಾಡಿರುವುದು—ಹಿರೋಹಿಟೋ ಮೆಕಾರ್ಥರೊಷನೆ ನಡೆಸಿದ ಭೇಟಿಯಲ್ಲಿ ತಿಳಿಸಿದರು

o o

ಮುಂದಿನ ಕಾಂಗ್ರೆಸ್ ಅಧ್ಯಕ್ಷತೆಗೆ ಸರದಾರ ಪಟೇಲರ ಹೆಸರನ್ನು ಮಹಾತ್ಮರು ಸೂಚಿಸಿದ್ದರೂ ಅವರ ಪ್ರಕೃತಿ ಅಷ್ಟೊಂದು ಸೆಟ್ಟಿಗಿಲ್ಲ ವಾದುದರಿಂದ ಮುಂದಿನ ಕಾಂಗ್ರೆಸ್ ಅಧ್ಯಕ್ಷತೆಗೆ ಶ್ರೀ ಶರತ್‌ಚಂದ್ರ ಬೋಸರನ್ನು ಆರಿಸುವ ಸಂಭವವಿದೆಯೆಂದು ಹೇಳಲಾಗಿದೆ.

o o

ಸ್ಟಾಲಿನ್ನರು ನಿಷ್ಪಕ್ಷಪಾತರಾಗುವ ಸಂಭವವಿಲ್ಲವೆಂದು ಎಡ್ಗಾರ್ ಸ್ನೋ ಅಭಿಪ್ರಾಯಪಟ್ಟಿದ್ದಾರೆ.

ರಾಜಕೀಯ ಖೈದಿಗಳಿಂದರೆ ನರಕಕ್ಕೆ ಹೋಗುವ ಪಾಪಿಗಳೇ?

ಅಲಹಾಬಾದ್, ಸೆ 29

ಕಾಶೀನಗರದಲ್ಲಿ ರಾಜಕೀಯ ಖೈದಿಗಳ ಮೇಲೆ ಅತ್ಯಾಚಾರ ನಡೆಸಿದ್ದು ಈಗ ತಿಳಿದುಬಂದಿದೆ.

ರಾಜಕೀಯ ಖೈದಿಗಳ ಕೈಗಳಿಗೆ ಕೋಳಗಳನ್ನು ತೊಡಿಸಿ, ಕಾಲುಗಳನ್ನು ಒಂದಿಸಿ ಒಂದು ಮೈಲಿ ದೂರದಲ್ಲಿದ್ದ ನ್ಯಾಯಾಸ್ಥಾನಕ್ಕೆ ಎಳೆದುಕೊಂಡು ಹೋದದ್ದು ಒಂದು ಮೈಲಯವರೆಗೆ ನಡೆಯುವುದು ತಮಗಸಾಧ್ಯವೆಂದು ಪೋಲಿಸಧಿಕಾರಿಗಳಿಗೆ ರಾಜಕೀಯ ಖೈದಿಗಳು ಉತ್ತರವಿತ್ತಿದ್ದರು. ನ್ಯಾಯಾಸ್ಥಾನವನ್ನು ತಲಪುವ ವೇಳೆಗೆ ಆ ರಾಜಕೀಯ ಖೈದಿಗಳ ಚರ್ಮವು ಸುಲಿಯಲ್ಪಟ್ಟು ನೆತ್ತರು ಹರಿಯುತ್ತಿದ್ದಿತು. ಈ ಅನಾಗರೀಕ ಕೃತ್ಯದ ವಾರ್ತೆಯು ಪಂ॥ ನೆಹರೂರವರ ಗಮನವನ್ನು ಎಳೆಯವಂತೆ ಮಾಡಿತು.

ಪಂ॥ ನೆಹರು ಹೇಳಿಕೆಯೊಂದನ್ನು ಹೊಡಿಸುತ್ತಾ "ಇದು ನಂಬಲನರ್ಹವಾದ ಕೆಟ್ಟ ಸುದ್ದಿ. ಆದರೆ, ಸತ್ಯಾಂಶಕ್ಕೂ ಸ್ರಸಿದ್ಧ ಕಾಶೀನಗರದಲ್ಲಿ ಈ ದುಷ್ಕೃತ್ಯ ನಡೆದಿದೆ. ವಕೀಲ ಸಂಘ ಪೋಲಿಸರ ಅಕ್ರಮ ವರ್ತನೆಯನ್ನು ತೀವ್ರವಾಗಿ ಖಂಡಿಸಿದೆ. ಬೆಲ್ಸ್ಕ್ ಶಿಬಿರದ ನೆನೆಪು ಈ ದುಷ್ಕೃತ್ಯ ತರುವುದು. ವ್ಯಸನಪೂರಿತವಾದ ಈ ಕೃತ್ಯವನ್ನು ಅರಿತ್ತಿದ್ದಾಗ್ಯೂ, ಅಲ್ಲಿಯ ಪ್ರಜೆಗಳು ತಂಪಾಗಿದ್ದುದು ಆಶ್ಚರ್ಯ! ಇದು ನಮ್ಮೆಲ್ಲರ ರಕ್ತವನ್ನು ಕುದಿಸಿದೆ; ಹುಚ್ಚರನಾಗಿ ಮಾಡಿದೆ; ಪ್ರತಿಕಾರ ಕೈಗೊಳ್ಳಲು ಬೋಧಿಸುತ್ತದೆ. ಟ್ವೀಸ್‌ಡೇಲ್ ಎಂಬ ಪೋಲಿಸ್ ಇನ್ ಸ್ಪೆಕ್ಟರ್ ಈ ಕೃತ್ಯಕ್ಕೆ ನಾಯಕನೆಂದು ವರದಿಯಾಗಿದೆ. ಇಂಥಹ ದುರಂತಪ್ರೇರಕ ವ್ಯಕ್ತಿಯ ವಿಚಾರಣೆ ಬಹಿರಂಗವಾಗಿ ಏರ್ಪಟ್ಟು, ಸತ್ಯಾಂಶ ಶಿಕ್ಷೆಯನ್ನು ವಿಧಿಸಬೇಕು" ಎಂದಿರುವರು.

---

೩ ಪತ್ರಿಕೆಗಳ ಮೇಲೆ ಮುಟ್ಟುಗೋಲು

ನ್ಯೂಯಾರ್ಕ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾದ ಅಮೇರಿಕಾ ಪತ್ರಿಕಾ ಪ್ರತಿನಿಧಿ ಮತ್ತು ಹಿರೋಹಿಟೋ ಭೇಟಿಯ ವಿವರಗಳನ್ನು ಎತ್ತಿ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸದವೆಂದು ಜಪಾನಿನ ೩ ಪತ್ರಿಕೆಗಳ ಪ್ರಕಟಣೆಯ ಮೇಲೆ ಮುಟ್ಟುಗೋಲು ಹಾಕಲಾಗಿದೆ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಿಂದಾ

ನೋಟಿಫಿಕೇಷನ್

1945 ನೇ ಅಕ್ಟೋಬರ್ ಮಾಹೆ 17 ನೇ ತಾರೀಖು ಬುಧವಾರ ಮಧ್ಯಾಹ್ನ 4 ಗಂಟೆವರಿವಿಗೆ ನಂಜನಗೂಡು ತಾಲ್ಲೂಕು ಮಡಹಳ್ಳಿ ಸಂತೆ ಮೈದಾನದಲ್ಲಿ ಸುಂಕದ ಕಟ್ಟೆಯನ್ನು ಕಟ್ಟುವ ಕೆಲಸಕ್ಕಾಗಿ ಸೀಲು ಮಾಡಿರತಕ್ಕ ಟೆಂಡರನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತೆ.

ಟೆಂಡರನ್ನು ಸೀಲು ಮಾಡಿದ ಕವರಿನಲ್ಲಿಟ್ಟು ಮೇಲುಗಡೆಯಲ್ಲಿ ಮೇಲೆ ನಮೂದು ಮಾಡಿರುವ ಕೆಲಸದ ಟೆಂಡರು ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಎಂದು ಅಡ್ರೆಸ್ಸು ಬರೆದು ಕಳುಹಿಸ ತಕ್ಕದ್ದು.

ತೇವಣಿಗಾಗಿ 50 ರೂಪಾಯಿಗಳನ್ನು ಖಜಾನೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಂಡಿಗೆ ಡಿಪಾಜಿಟ್ ಮಾಡಿ ಸದರಿ ಡೂಪ್ಲಿಕೇಟು ಛಲನ್ನನ್ನು ಟೆಂಡರು ಜೊತೆಯಲ್ಲಿ ಹಾಜರು ಮಾಡಬೇಕು

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಆಫೀಸು ದಿನಗಳಲ್ಲಿ ಮಧ್ಯಾಹ್ನ 12 ರಿಂದ ಸಾಯಂಕಾಲ 5 ಗಂಟೆಯವರೆವಿಗೆ ಇಚ್ಛವುಳ್ಳ ಕಂಟ್ರಾಕ್ಟರುಗಳು ತಿಳಿಯಬಹುದು.

ಯಾವ ಟೆಂಡರನ್ನು ಆಪೈರಾಗಿ ಒಪ್ಪಿಕೊಳ್ಳುವುದು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರನ ಅಧಿಕಾರಕ್ಕೆ ಒಳಪಟ್ಟಿರತ್ತೆ ವತ್ತು ಅಂಗೀಕಾರ ಮಾಡದೆ ಇರತಕ್ಕ ಟೆಂಡರುಗಳಿಗೆ ಕಾರಣವನ್ನು ಸೂಚಿಸಲಾಗುವುದಿಲ್ಲ.

(ಸಹಿ) ಕೆ. ಸಿ. ಸುಬ್ಬಣ್ಣ
ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಬೋರ್ಡ್
ಮೈಸೂರು

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ವೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಡ್ಡು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಪ್ತಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ಸತ್ಯವಾದಿ
ದಿನ ಪತ್ರಿಕೆ
ಸ್ಥಳದಲ್ಲಿ — ತಿಂಗಳಿಗೆ 6 ಆಣೆ
ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ, ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0
ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

AT Opera—

ದುರ್ಗಾ ಖೋಟೆ, ಕುರ್ಶಿದ್, ನಾಜಿರ್ ಡೇವಿಡ್ ಪಾತ್ರವಹಿಸಿರುವ

ಜಮಾನ್

From 10-10-45

ರಂಜಕ್, ಟಿ. ಆರ್, ರಾಜಕುಮಾರಿ ಕೆ. ಎಲ್. ವಿ. ವಸಂತ, ಕೃಷ್ಣ, ಮಥುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows
From 11 10-45

Tarzan Triumphs

ಅಕ್ಕರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

At Ranjit Humayun

5 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್ ವೀಣಾ, ನರ್ಗಿಸ್,, ಷಾ ನವಾಸ್ ಪಾತ್ರವಹಿಸಿರುವರು

ಆಮಂತ್ರಣ
ಅತಿಸಾರಗಳಿಗೆ
.... ಖಾತ್ರಿ ....
ಗುಣಕಾರಿಯಾದ
ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಬಂಗ್ಲಾ ಸೈಟುಗಳನ್ನು ತಾರೀಖು 12-9-1945 ನೇ ಹರಾಜು ಇಸ್ತಿಹಾರ್‌ನಾಮೆಯ ಷರತ್ತು ಪ್ರಕಾರ ತಾರೀಖು 20-10-1945 ರಿಂದ 23-10-1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ
ಛೇರ್ಮನ್